ಕೂತುಕೊಳ್ಳುವುದಕ್ಕೆ ಬೇಕಷ್ಟು ಕುರ್ಚಿಗಳು, ಸೋಫಾಗಳು ಇದ್ದುವು. ಹಲವರು ಗುಂಪು ಗುಂಪಾಗಿ ಕುಳಿತು ಹರಟುತ್ತಿದ್ದರು. ನಾನು ಏಕಾಂಗಿಯಿದ್ದಂತೆ ಅನಿಸಿತು. ಒಂದು ಸಾದಾ ಕುರ್ಚಿ ಎಳೆದು ಕುಳಿತುಕೊಂಡೆ. ಟ್ರೇಯಲ್ಲಿ ಹುಡುಗಿಯರು ತಿಂಡಿ ತಿನಿಸು, ಪಾನೀಯ ಆಗಾಗ್ಗೆ ತಂದು ನೀಡುತ್ತಿದ್ದರು. ನನಗೆ ಬಹಳ ಹಸಿವಾಗಿದ್ದರಿಂದ (ಕಾರಣ ನಾನು ಶ್ರಮದಿಂದ ದಾರಿ ಕ್ರಮಿಸಿ ಬಂದಿದ್ದೆ) ಸಾಕಷ್ಟು ತಿಂದು ಕುಡಿದು ಮಾಡಿದೆ. ನನ್ನ ಕುರಿತು ಗುಸು ಗುಸು ಮಾತಾಡಿಕೊಳ್ಳುತ್ತಿದ್ದವರಲ್ಲಿ ಇಬ್ಬರು ಥಟ್ಟನೆ ಎಲ್ಲಿಗೋ ಹೋದರು. ಬಹುಶಃ ಲೂಗೆ ಅಂದುಕೊಂಡೆ. ನಾನೂ ಹೋಗಬೇಕಿತ್ತು. ಸುಸ್ತಾಗಿದ್ದರಿಂದ ಸ್ವಲ್ಪ ತಡೆದು ಹೋದರಾಯಿತು ಎಂದುಕೊಂಡು ಕುಳಿತಲ್ಲೇ ಮಂಪರಿಗೊಳಗಾದೆ.

ಎಷ್ಟು ವೇಳೆ ಕ್ರಮಿಸಿತೋ ತಿಳಿಯದು. ನನ್ನ ಪಂಚೇಂದ್ರಿಯಗಳನ್ನೂ ಬಡಿದೆಬ್ಬಿಸುವ ಸೊಬಗಿನ ಹುಡುಗಿಯೊಬ್ಬಳು ನನ್ನ ಬಳಿ ನಿಂತಿದ್ದಳು. ಯೂನಿಫಾರಮಿನಲ್ಲಿದ್ದಳು; ಎಂದರೆ ಈ ಎಸ್ಟಾಬ್ಲಿಷ್‌ಮೆಂಟಿಗೆ ಸೇರಿದವಳು ಎನಿಸಿತು. (ಇಲ್ಲೆಲ್ಲಾ ಹುಡುಗಿಯರದೇ ಕಾರುಭಾರು ಇರಬೇಕು.) 'ನಮಸ್ಕಾರ ಸರ್!' ಎಂದಳು. 'ನಮಸ್ಕಾರ! ಹೇಗಿದ್ದೀಯಮ್ಮ?' ಎಂದೆ. ಅದಕ್ಕವಳು ಉತ್ತರಿಸದೆ, 'ಟ್ರೈಬ್ಯೂನಲ್ ನಿಮ್ಮನ್ನು ಕರೀತಿದ್ದಾರೆ,' ಎಂದಳು. 'ಟ್ರೈಬ್ಯೂನಲ್? ಯಾಕೆ?' ಎಂದೆ. 'ಏನೋ ಫಾರ್ಮಾಲಿಟಿ,' ಎಂದಳು. 'ಇಲ್ಲೀನೂ ಫಾರ್ಮ್ ಗೀರ್ಮ್ ತುಂಬಿಸೋದು ಇದೆಯಾ?' ಎಂದೆ. 'ಅದೇನಿಲ್ಲ. ಆದರೆ ಅವರು ನಿಮ್ಮ ಜತೆ ಮಾತಾಡಬೇಕಂತೆ,' ಎಂದಳು. 'ಸರಿ. ಎಲ್ಲಿದೆ ಟ್ರೈಬ್ಯೂನಲ್?' 'ಓ ಅಲ್ಲಿ! ಆ ಡೋಮ್ ತರದ ಡೇರೆ ಇದೆಯಲ್ಲ, ನೀಲಿ ಬಣ್ಣದ್ದು ಅಲ್ಲಿದ್ದಾರೆ.' ಇದೇನೋ ಸ್ಪೆಷಲ್ ಟ್ರೀಟ್‌ಮೆಂಟ್ ಅನಿಸಿ ಸಂತೋಷವಾಯಿತು ನನಗೆ. ಯಾಕೆಂದರೆ ಇನ್ನು ಯಾರನ್ನೂ ಹೀಗೆ ಟ್ರೈಬ್ಯೂನಲ್ ಮುಂದೆ ಕರೆದಂತೆ ತೋರಲಿಲ್ಲ. ನನ್ನ ಇಷ್ಟು ಕಾಲದ ಸಾಧನೆಗೆ ಅದೇನೋ ಸ್ಪೆಷಲ್ ಸ್ಟೇಟಸ್ ಖಂಡಿತಾ ಇದೆ. ತೊಟ್ಟ ಶರ್ಟು ಇದ್ದಲ್ಲೇ ಸರಿಪಡಿಸಿಕೊಂಡು ಮುಂದರಿದೆ. ಆ ಹುಡುಗಿ ನನ್ನನ್ನು ಡೇರೆಯ ಬಾಗಿಲ ತನಕ ತಂದು ಬಿಟ್ಟಳು. ಒಬ್ಬನೇ ಒಳ ಹೋಗಲು ಸ್ವಲ್ಪ ಅಳುಕಿದೆ. ಯಾಕೆಂದರೆ ನಾನು ಮಾರ್ಜಿನಲ್ ಮನುಷ್ಯ. ಎದುರು ಹೋಗಿಯೇ ಗೊತ್ತಿಲ್ಲ. 'ನೀನೂ ಬಾ, ಟ್ರೈಬ್ಯೂನಲ್ ತನಕ, ನೀನು ಬಂದರೆ ನನಗೆ ಸಂತೋಷವಾಗುತ್ತೆ,' ಎಂದೆ. ಒಳ್ಳೇ ಹುಡುಗಿ ಅವಳು. ಮಾತೆತ್ತದೆ ನನ್ನ ಜತೆ ಬಂದಳು. ಡೇರೆಯೊಳಗೆ ಅದೆಷ್ಟೋ ಮಂದಿ ಕೂತಿದ್ದರು. ಒಂದು ರೌಂಡ್ ಟೇಬಲ್ ಸುತ್ತ ಅರ್ಧಚಂದ್ರಾಕಾರವಾಗಿ ಕೂತಂತೆ. ನಮ್ಮ ಪಾರ್ಲಿಮೆಂಟಿನಲ್ಲಿರುತ್ತದಲ್ಲ, ಹಾಗೆ. ಮಧ್ಯೆ ಮೂರು ಮಂದಿ ಪ್ರತ್ಯೇಕವಾಗಿ ಕೂತಿದ್ದರು. ನಡುವೆ ಒಬ್ಬ ಮಹಿಳೆ; ಅವಳ ಆಚೀಚೆ ಇಬ್ಬರು ಪುರುಷರು. ಓಹೋ, ಇವರೇ ಟ್ರೈಬ್ಯೂನಲ್ ಇರಬೇಕು ಎಂದುಕೊಂಡೆ. ಇವರು ಮೂವರೂ ಅಲಂಕೃತವಾದ ಆಸನಗಳಲ್ಲಿ ಉಪಸ್ಥಿತರಿದ್ದರೆ, ಅವರ ಮುಂದೆ ಅಂಚಿಗೆ ಕುಸುರಿ ಕೆಲಸವಿದ್ದ ಬಿಳಿ ಬಟ್ಟೆ ಹಾಸಿದ ಮೇಜಿನ ಮೇಲೆ ಹೂದಾನಿಗಳು, ನೀರಿನ ಬಾಟಲ್‌ಗಳು, ಕಾಲಿಂಗ್ ಬೆಲ್ಲು, ಕಾರ್ಡ್‌ಲೆಸ್ ಮೈಕುಗಳು ಇತ್ಯಾದಿ. ಮಧ್ಯದಲ್ಲಿದ್ದ ಅಧ್ಯಕ್ಷೆಯ ಮುಂದೆ ದೊಡ್ಡದೊಂದು ಹ್ಯಾಮರ್ ಸಹಾ ಕೂತಿತ್ತು. ಮನುಷ್ಯನೊಬ್ಬನನ್ನು ಒಂದೇ ಏಟಿನಲ್ಲಿ ಕೊಲ್ಲಬಹುದಾದಷ್ಟು ಘನವಾಗಿತ್ತು ಅದು. ಆದರೆ ನನ್ನ ಗಮನ ಸೆಳೆದದ್ದು ಟ್ರೈಬ್ಯೂನಲ್‌ನ ಹಿಂದೆ ಅವರಿಗಿಂತಲೂ ಎತ್ತರದ ಕಪ್ಪು ಪೀಠಗಳಲ್ಲಿ ಕುಳಿತಿದ್ದ ಕೆಲವು ಮಂದಿ. ಅವರು ಬಿಡುಗಣ್ಣರಾಗಿ ನನ್ನನ್ನೇ ದಿಟ್ಟಿಸಿ ಕೋಪದಿಂದ ನೋಡುತ್ತಿದ್ದರು. ಜೀವಂತ ಮನುಷ್ಯರೋ ಪ್ರತಿಮೆಗಳೋ ನನಗೆ ತಿಳಿಯಲಿಲ್ಲ. ಚಕ್ಕಳಮಕ್ಕಳ ಹಾಕಿ ನಿಶ್ಚಲ ಕೂತಿದ್ದ ಅವರನ್ನು ಕಂಡು ನನಗೆ ಭಯವಾಯಿತು. 'ಯಾರಿವರು?'